# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 859 (960) |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | ಡಾ. ತಳವಾರ್ ಸಾಬಣ್ಣ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | 24-07-2024 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ವಿಜಯಪುರ ಜಿಲ್ಲೆಯಲ್ಲಿ ಖೊಟ್ಟಿ ದಾಖಲೆ ಸೃಷ್ಟಿಸಿ ರೈತರ/ಜನ ಸಾಮಾನ್ಯರ ಮತ್ತು ಸರ್ಕಾರಿ ಜಮೀನು ಕಬಳಿಸಿರುವ ಪ್ರಕರಣಗಳ ಸಂಖ್ಯೆ ಎಷ್ಟು; | ವಿಜಯಪುರ ಜಿಲ್ಲೆಯ ಅಧೀನದಲ್ಲಿ ಒಟ್ಟು ಆರು ಉಪನೋಂದಣಿ ಕಛೇರಿಗಳು ಇದ್ದು, ಇದರಲ್ಲಿ ವಿಜಯಪುರ ಉಪ ನೋಂದಣಿ ಕಛೇರಿಯಲ್ಲಿ ದಸ್ತಾವೇಜು ಸಂಖ್ಯೆ:4546/24-25ಕ್ಕೆ ಸಂಬಂಧಿಸಿದಂತೆ, ಆದರ್ಶನಗರ ಪೊಲೀಸ್ ಠಾಣೆಯಲ್ಲಿ ದಿನಾಂಕ:19-06-2024 ರಂದು ಕ್ರೈಂ ಸಂಖ್ಯೆ: 0063/2024 ರಂತೆ ಎಫ್‌ಐಆರ್ ದಾಖಲಾಗಿರುತ್ತದೆ ಮತ್ತು ಇಂಡಿ ಉಪ ನೋಂದಣಿ ಕಛೇರಿಯಲ್ಲಿ ನೋಂದಾಯಿಸಿದ ದಸ್ತಾವೇಜು ಸಂಖ್ಯೆ:19503/23-24ಕ್ಕೆ ಸಂಬಂಧಿಸಿದಂತೆ, ಇಂಡಿ ಪೊಲೀಸ್ ಠಾಣೆಯಲ್ಲಿ ದಿನಾಂಕ:10-06-2024 ರಂದು ಕ್ರೈಂ ಸಂಖ್ಯೆ:0042/2024 ರಂತೆ ಎಫ್‌ಐಆರ್ ದಾಖಲಾಗಿದ್ದು, ಪ್ರಕರಣಗಳ ವಿಚಾರಣೆ ಚಾಲ್ತಿಯಲ್ಲಿರುತ್ತವೆ. |
| ಆ | ಜಿಲ್ಲೆಯಲ್ಲಿ ನಕಲಿ ಆಧಾರ ಕಾರ್ಡ್, ಪ್ಯಾನ್ ಕಾರ್ಡ್ ಮುಂತಾದ ದಾಖಲೆಗಳನ್ನು ಸೃಷ್ಟಿಸಿ, ಜನ ಸಾಮಾನ್ಯರ ಮತ್ತು ಸರ್ಕಾರಿ ಜಮೀನು ಕಬಳಿಸಿರುವುದು/ ವರ್ಗಾಯಿಸಿರುವುದನ್ನು ಪತ್ರಿಕೆಗಳಲ್ಲಿ ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಪ್ರಸ್ತುತ ದಸ್ತಾವೇಜುಗಳನ್ನು ನೋಂದಣಿ ಮಾಡುವಾಗ ಪಕ್ಷಕಾರರ ದೃಢೀಕರಣವನ್ನು UIDAIನ ತಂತ್ರಾಂಶದ ಮುಖಾಂತರ Bio Metric Data ಗಳನ್ನು Authenticate ಮಾಡಿ ನೋಂದಣಿ ಕಾರ್ಯ ಮಾಡಲಾಗುತ್ತಿರುವುದರಿಂದ ನಕಲಿ ಪ್ಯಾನ್ ಕಾರ್ಡ್, ಆಧಾರ ಕಾರ್ಡ್ ಮುಂತಾದ ದಾಖಲೆಗಳನ್ನು ಸೃಷ್ಟಿಸಿ ನೋಂದಣಿ ಮಾಡುವುದನ್ನು ತಡೆಯಲಾಗಿದೆ. |
| ಇ | ಉಪ ನೋಂದಣಿ ಕಛೇರಿಯಲ್ಲಿ ಮಧ್ಯವರ್ತಿಗಳು ಸಿಬ್ಬಂದಿ ಮತ್ತು ಅಧಿಕಾರಿಗಳು ಇದರಲ್ಲಿ ಭಾಗಿಯಾಗಿದ್ದಾರೆಂಬ ವರದಿಗಳು ಬಂದರೂ ಸರ್ಕಾರ ಮೌನವಾಗಿರಲು ಕಾರಣಗಳೇನು; ಅಂತಹವರುಗಳ ಮೇಲೆ ಇಲ್ಲಿಯವರೆಗೆ ಕಠಿಣ ಕ್ರಮಗಳನ್ನು ಸರ್ಕಾರ ಕೈಗೊಳ್ಳದಿರಲು ಕಾರಣವೇನು; | ಉಪ ನೋಂದಣಿ ಕಛೇರಿಯಲ್ಲಿ ಮಧ್ಯವರ್ತಿಗಳು, ಸಿಬ್ಬಂದಿ ಮತ್ತು ಅಧಿಕಾರಿಗಳು ಭಾಗಿಯಾಗಿರುವುದು ಈ ಜಿಲ್ಲೆಯಲ್ಲಿ ಕಂಡುಬಂದಿರುವುದಿಲ್ಲವೆಂದು ಜಿಲ್ಲಾ ನೋಂದಣಾಧಿಕಾರಿ ವಿಜಯಪುರ ರವರು ವರದಿ ಮಾಡಿರುತ್ತಾರೆ. |
| ಈ | ವಿಜಯಪುರ ನಗರ ಸ್ಥಾನ ಮತ್ತು ಇಂಡಿ ಹಾಗೂ ಇನ್ನಿತರ ಸ್ಥಳಗಳಲ್ಲಿ ನಕಲಿ ದಾಖಲೆ ಸೃಷ್ಟಿಸಿ ಭೂಮಿ ಕಬಳಿಸುವ ಕೃತ್ಯವನ್ನು ತಡೆಗಟ್ಟಿ ಅವರ ಮೇಲೆ ಕಾನೂನು ಕ್ರಮ ಕೈಗೊಂಡು ಅಮಾಯಕರ ಮತ್ತು ಸರ್ಕಾರದ ಭೂಮಿ ವಾಪಸ್ಸು | ವಿಜಯಪುರ ಉಪ ನೋಂದಣಿ ಕಛೇರಿಯಲ್ಲಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಖರೀದಿ ಪತ್ರವು ದಸ್ತಾವೇಜು ಸಂಖ್ಯೆ:4546/24-25 ರಲ್ಲಿ ನೋಂದಣಿಯಾಗಿದ್ದು, ಈ ಕುರಿತು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ಕ್ರೈಂ ಸಂಖ್ಯೆ: 0063/2024 ರಂತೆ ಪಕ್ಷಕಾರರೇ ದೂರು ದಾಖಲಿಸಿರುತ್ತಾರೆ ಮತ್ತು ಇಂಡಿ ಉಪ ನೋಂದಣಿ |

| | | |
|---|---|---|
| | ಪಡೆಯಲು ಯಾವ ಕ್ರಮ ಕೈಗೊಳ್ಳಲಾಗುವುದು? | ಕಛೇರಿಯಲ್ಲಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ಖರೀದಿ ಪತ್ರವು ದಸ್ತಾವೇಜು ಸಂಖ್ಯೆ:19503/23-24 ರಲ್ಲಿ ನೋಂದಣಿಯಾಗಿದ್ದು, ಈ ಕುರಿತು ಪೊಲೀಸ್ ಠಾಣೆಯಲ್ಲಿ ಎಫ್ಐಆರ್ ಕ್ರಂ ಸಂಖ್ಯೆ: 0042/2024 ರಂತೆ ಇಲಾಖಾ ವತಿಯಿಂದ ದೂರು ದಾಖಲಿಸಲಾಗಿರುತ್ತದೆ.<br><br>ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ 2023 ರಂತೆ ನೋಂದಣಿ ಕಾಯ್ದೆ-1908 ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಂತೆ ತಿದ್ದುಪಡಿ ತಂದು ಕಲಂ-22ಬಿ, 22ಸಿ ಮತ್ತು 22ಡಿ ಅನ್ನು ದಿನಾಂಕ:22-12 2025 ರಿಂದ ಜಾರಿಗೆ ಬರುವಂತೆ ಅಧಿಸೂಚನೆ ಹೊರಡಿಸಿದ್ದು, ಸದರಿ ತಿದ್ದುಪಡಿಯಲ್ಲಿ ಖೊಟ್ಟಿ ದಾಖಲೆಗಳ ಆಧಾರದಲ್ಲಿ ನೋಂದಣಿಯಾಗಿರುವ ದಸ್ತಾವೇಜುಗಳನ್ನು ಜಿಲ್ಲಾ ನೋಂದಣಾಧಿಕಾರಿಗಳ ಹಂತದಲ್ಲಿಯೇ ರದ್ದತಿ ಮಾಡುವ ಅಧಿಕಾರವನ್ನು ನೀಡಿದ್ದು, ಇಂತಹ ಪ್ರಕರಣಗಳಲ್ಲಿ ಭಾಗಿಯಾಗಿರುವವರ ವಿರುದ್ಧ ಕಠಿಣ ಕ್ರಮಗಳನ್ನು ಜರುಗಿಸುವ ಅಧಿಕಾರವನ್ನು ನೀಡಲಾಗಿದೆ.<br><br>ನೋಂದಣಿ ಸಮಯದಲ್ಲಿ ಪಕ್ಷಕಾರರ ಪಕ್ಷಕಾರರ ದೃಢೀಕರಣವನ್ನು UIDAIನ ತಂತ್ರಾಂಶದ ಮುಖಾಂತರ Bio Metric Data ಗಳನ್ನು Authenticate ಮಾಡಿಯೇ ನೋಂದಣಿ ಮಾಡುವಂತೆ ಕಾವೇರಿ-2.0 ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿರುತ್ತದೆ. |

ಕಂಇ/141/ಎಂಎನ್ಎಸ್ಎ/2024

**(ಕೃಷ್ಣ ಬೈರೇಗೌಡ)**